ಸ್ಫೂರ್ತಿಕಥನ

# ಬುದ್ಧಿಮಾಂದ್ಯರಿಗೆ ‘ಅಕ್ಷದಾ’ ನೆರವು

ಶುಭಜಿತ್ ಸದ್ಯ ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಅಕ್ಷದಾ ಫೌಂಡೇಷನ್‌ನಲ್ಲಿ ಹಿರಿಯ ಕಾರ್ಯಕ್ರಮ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಫೌಂಡೇಷನ್‌ನ ಸಂಸ್ಥಾಪಕರು ಸುಮನಾ ದತ್ತ. ಈ ಸಂಸ್ಥೆಯ ಉದ್ದೇಶ ಬುದ್ಧಿಮಾಂದ್ಯ ಹಾಗೂ ಆಟಿಸಂನಿಂದ ಬಳಲುತ್ತಿರುವ ಮಕ್ಕಳಿಗೆ ಅಗತ್ಯ ಶಿಕ್ಷಣ ಹಾಗೂ ಥೆರಪಿಗಳನ್ನು ಒದಗಿಸುವುದು.

ತನ್ನ ಮಗಳು ಆಟಿಸಂನಿಂದ ಬಳಲುತ್ತಿದ್ದು, ಅವಳಿಂದಲೇ ಅವಳಂತೆಯೇ ಈ ಸಮಸ್ಯೆಗೆ ಗುರಿಯಾಗಿರುವ ಮಕ್ಕಳ ಕಷ್ಟಗಳು ನನಗೆ ಅರಿವಾದವು. ಅವಳನ್ನು ಶಾಲೆಗೆ ದಾಖಲಿಸಿಕೊಳ್ಳಲು ಅನೇಕ ಶಾಲೆಗಳು ಹಿಂಜರಿದವು. ಸೇರಿಸಿಕೊಂಡರೂ ಹಲವು ಷರತ್ತುಗಳು ಮತ್ತು ಮಿತಿಗಳನ್ನು ಹೇರಿದವು. ಇವು ಇತರ ಮಕ್ಕಳಂತೆ ಅವಳು ಶಾಲೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಅಡ್ಡಿಯಾಯಿತು. ಏನೂ ತಪ್ಪುಮಾಡದ ಮಕ್ಕಳಿಂದ ಸಮಾನತೆಯ ಹಕ್ಕನ್ನು ಕಿತ್ತುಕೊಂಡಂತೆ ಭಾಸವಾಗುತ್ತಿತ್ತು. ಆಗಲೇ, ನನ್ನ ಮಗಳಂತೆಯೇ ಆಟಿಸಂನಿಂದ ಬಳಲುತ್ತಿರುವ ಮಕ್ಕಳಿಗಾಗಿ ಎಲ್ಲ ವ್ಯವಸ್ಥೆಯೊಳಗೊಂಡ ಸಂಸ್ಥೆ ಹುಟ್ಟುಹಾಕುವ ಆಲೋಚನೆ ಚಿಗುರೊಡೆಯಿತು. 2012ರಲ್ಲಿ ಅಕ್ಷದಾ ಫೌಂಡೇಷನ್ ಶುರುಮಾಡಿದೆ. ಫೌಂಡೇಷನ್‌ನ ಧ್ಯೇಯ ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ, ಜೀವನ ಕೌಶಲ, ಸ್ವಾತಂತ್ರ್ಯ ಮತ್ತು ಸಮುದಾಯದ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸುವುದು ಎನ್ನುತ್ತಾರೆ ಸುಮನಾ ದತ್ತ.


ಸುಮನಾ ದತ್ತ

### ಶುಭಜಿತ್‌ಗೆ ಸಂದ ಗೌರವ

| | | |
|---|---|---|
| ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ | ಡೇರಿಂಗ್ ಟೂ ವೀಲರ್ ರೈಡರ್ | 2020 |
| ಸ್ಟೂಡೆಂಟ್ ಇನೊವೇಷನ್ ಪ್ರಶಸ್ತಿ | ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ, ದೆಹಲಿ | 2020 |
| ಕೊರೊನಾ ವಾರಿಯರ್ ಪ್ರಶಸ್ತಿ | ಸ್ಮೃತಿ ಸದನ | 2020 |
| ಪ್ರೈಡ್ ಇಂಡಿಯನ್ ಪ್ರಶಸ್ತಿ | ಸ್ಮೃತಿ ಸದನ | 2021 |




ಬಳಲುತ್ತಿರುವವರ ಬಗೆಗಿನ ಈ ಮನಸ್ಥಿತಿ ಬದಲಾಗಬೇಕು’ ಎಂದು ಒತ್ತಿ ಹೇಳುತ್ತಾರೆ.

ಅಂಗವಿಕಲರು ಎಂದಾಕ್ಷಣ ಜನರು ತುಂಬಾ ಕರುಣೆ ತೋರುತ್ತಾರೆ. ‘ತಮ್ಮಿಂದ ಏನೂ ಸಾಧ್ಯವಿಲ್ಲ’ ಎಂಬುದನ್ನು ಜನರೇ ಅವರ ಮನಸ್ಸಿನಲ್ಲಿ ತುಂಬುತ್ತಾರೆ. ಕನಿಕರದಿಂದ ನಮ್ಮನ್ನು ನೋಡುವ ನಿಮ್ಮ ಮನಸ್ಥಿತಿ ಮೊದಲು ಬದಲಾಗಬೇಕು. ನಿಮ್ಮಂತೆಯೇ ನಾವೂ ಸಮಾನರೆಂದು ಭಾವಿಸಬೇಕು. ಸಾಧ್ಯವಿರುವ ಎಲ್ಲ ಅವಕಾಶಗಳನ್ನು ಒದಗಿಸಬೇಕು ಎನ್ನುವ ಶುಭಜಿತ್ ಅವರಿಗೆ ಸಹಾಯದ ನಿರೀಕ್ಷೆಯಲ್ಲೇ ಕಾಲ ಕಳೆಯುತ್ತಿರುವ ಅಂಗವಿಕಲರ ಬಗ್ಗೆ ತೀವ್ರ ಆಕ್ಷೇಪವಿದೆ.

ಅಂಗವೈಕಲ್ಯದಿಂದ ಬಳಲುತ್ತಿರುವ ಜನರು ಸಹಾಯಕ್ಕೆ ಅತಿಯಾದ ನಿರೀಕ್ಷೆ ಮಾಡುತ್ತಾರೆ. ನನ್ನ ಪ್ರಕಾರ ಅವರಿಗೆ ಸಹಾಯವೇ ಬೇಕಿಲ್ಲ. ಸಹಾಯ ಬೇಡಿ, ನಮ್ಮನ್ನು ನಾವೇ ಅಸಹಾಯಕರೆಂದು ಜನರ ಮುಂದೆ ಬಿಂಬಿಸಿಕೊಳ್ಳಬಾರದು. ನಾನೂ ಮಿಕ್ಕವರಂತೆ ಸರಿಸಮಾನ, ನನಗೆ ಯಾರ ನೆರವು ಬೇಕಿಲ್ಲ ಎಂಬ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂಬುದು ಅವರ ನಿಲುವು.

‘ಕೈಗಳಿಲ್ಲ ಎಂಬ ಕಾರಣಕ್ಕೆ ನಾನು ಕುಗ್ಗಿಲ್ಲ. ಹಿಂದೆ ಉಳಿದಿಲ್ಲ. ಸ್ವಮರುಕ ಪಟ್ಟಿಲ್ಲ. ಚೆನ್ನಾಗಿಯೇ ಓದಿದ್ದೇನೆ. ಸ್ನಾತಕೋತ್ತರ ಪದವಿ ಪಡೆದಿದ್ದೇನೆ. ಸಾಕಷ್ಟು ಮಂದಿಗೆ ಸಹಾಯ ಮಾಡಿದ್ದೇನೆ. ಸರ್ಕಾರ ಮತ್ತು ಸಮಾಜ ನನ್ನನ್ನು ಅಂಗವಿಕಲ ಎನ್ನುತ್ತದೆ. ಆದರೆ, ನಾನು ಅಂಗವಿಕಲನಲ್ಲ. ಸಾಮಾನ್ಯರು ಮಾಡುವಂತಹ ಎಲ್ಲ ಕೆಲಸಗಳನ್ನು ನಾನೂ ಮಾಡುತ್ತೇನೆ. ಬೈಕ್ ಓಡಿಸುತ್ತೇನೆ, ಕಾರು ಚಲಾಯಿಸುತ್ತೇನೆ, ಸಮಾಜ ಸೇವೆ ಮಾಡುತ್ತಿದ್ದೇನೆ. ನನ್ನ ಬಹುತೇಕ ಕೆಲಸಗಳನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ. ಅಂಗವಿಕಲನೆಂಬ ಯಾವ ಭಾವವೂ ನನ್ನಲ್ಲಿಲ್ಲ’ ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ.

### ಕೈಗಳನ್ನು ಕಳೆದುಕೊಂಡದ್ದೇ ಆಕಸ್ಮಿಕ

ಶುಭಜಿತ್‌ಗೆ ಆಗ ಐದು ವರ್ಷ. ಅಪ್ಪ–ಅಮ್ಮನೊಂದಿಗೆ ಹೆಬ್ಬಾಳದಲ್ಲಿ ವಾಸ. ಬಾಲ್ಯದಲ್ಲಿ ತುಂಬಾ ಚುರುಕುತನದ ಹುಡುಗ. ಹೀಗೆ ಒಂದು



ಸಾರ್ಥಿ ಯೋಜನೆಯಡಿ ಸರ್ಕಾರಿ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸುತ್ತಿರುವ ಶುಭಜಿತ್